**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**
**(ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆ: 5076/2025**

ಪಿರ್ಯಾದುದಾರರು: ಕೆ ಆರ್ ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

- ವಿರುದ್ದ -

ಆರೋಪಿಗಳು: ಕುಮಾರ ಬಿ.ಡಿ. ಮತ್ತು ಇನ್ನೊಬ್ಬ

**ದೋಷಾರೋಪಣೆ**

ಶ್ರೀಮತಿ ಜ್ಯೋತ್ಸ್ನಾ ಡಿ., ಎಲ್ಎಲ್.ಬಿ., ಎಲ್ಎಲ್.ಎಂ., ಡಿ.ಎಫ್.ಎ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿಗಳಾದ

1. ಕುಮಾರ ಬಿ.ಡಿ.
   ಬಿನ್ ದೇವರಾಜೇಗೌಡ,
   ವಯಸ್ಸು: 42 ವರ್ಷಗಳು,

2. ಕೃಷ್ಣ ಬಿ.ಆರ್.
   ಬಿನ್ ರಾಮೇಗೌಡ,
   ವಯಸ್ಸು: 40 ವರ್ಷಗಳು,

   ವಾಸ: ಬೂಕನಕೆರೆ ಗ್ರಾಮ,
   ಕೆ.ಆರ್. ಪೇಟೆ ತಾಲ್ಲೂಕು,
   ಮಂಡ್ಯ ಜಿಲ್ಲೆ.

ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ರಚಿಸಿರುತ್ತೇನೆ.

- - -

ಮೊದಲನೆಯದಾಗಿ ಕೆ ಆರ್ ಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆ ಆರ್ ಪೇಟೆ ತಾಲ್ಲೂಕು, ಬೂಕನಕೆರೆ ಹೋಬಳಿ ಮತ್ತು ಬೂಕನಕೆರೆ ಗ್ರಾಮದ ವಾಸಿಗಳಾದ ಸಾಕ್ಷಿ 1 ರಿಂದ 3 ರವರ ಮನೆಯ ಮುಂದೆ ಸರ್ವೆ ನಂ.161/1 ರ ಜಮೀನಿನ ವಿಚಾರವಾಗಿ ಸಾಕ್ಷಿ 3 ರವರು ದಾವಾ ಸಂಖ್ಯೆ: 94/2021 ರಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು ನ್ಯಾಯಾಲಯವು ಎದುರುದಾರರಿಗೆ ಜಮೀನಿಗೆ ಪ್ರವೇಶಿಸಲು ತಡೆಯಾಜ್ಞೆ ನೀಡಿದ್ದರೂ ಸಹ 1 ಮತ್ತು 2 ನೇ ಆರೋಪಿಗಳಾದ ನೀವು ಆಗಾಗ್ಗೆ ಜಮೀನಿನಲ್ಲಿದ್ದ ಬೋರ್ ವೈರ್ ಕಟ್ ಮಾಡಿ ತೊಂದರೆ ನೀಡಿರುತ್ತೀರಿ, ನಂತರ ದಿ: 18.04.2025 ರಂದು ಬೆಳಿಗ್ಗೆ ಸುಮಾರು 11.30 ಗಂಟೆಯ ಸಮಯದಲ್ಲಿ ಆರೋಪಿಗಳಾದ ನೀವು ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಸದರಿ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿ ಜಮೀನನ್ನು ಉಳುಮೆ ಮಾಡಲು ಪ್ರಯತ್ನಿಸಿರುತ್ತೀರಿ. ಈ ಕಾರಣದಿಂದ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್-2023) ಕಲಂ 329(3) ಸಹವಾಚಕ 3(5) ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

2. ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಜಮೀನನ್ನು ಉಳುಮೆ ಮಾಡಲು ಪ್ರಯತ್ನಿಸುತ್ತಿದ್ದಾಗ ಸಾಕ್ಷಿ 2 ಮತ್ತು 3 ರವರು ನಿಮ್ಮನ್ನು ತಡೆದು ಕೇಳಿದಾಗ ನೀವು ಸಾಕ್ಷಿ 2 ರವರೊಂದಿಗೆ ಗಲಾಟೆ ಮಾಡಿ ಗೊದಮಟ್ಟೆಯಿಂದ ಮೈ ಮೇಲೆ ಹೊಡೆದು ಎಡಗೈನ ಬೆರಳುಗಳನ್ನು ತಿರುಗಿಸಿ ನುಲುಚಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಕಾರಣದಿಂದ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತ (ಬಿಎನ್ಎಸ್)-2023 ಕಲಂ 118(2) ಸಹವಾಚಕ 3(5) ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

**3.** ಮೂರನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ **2** ರವರೊಂದಿಗೆ ಗಲಾಟೆ ಮಾಡಿ ಆರೋಪಿಗಳಾದ ನೀವು ನಿಮ್ಮ ಕಾಲು ಮತ್ತು ಕೈಗಳಿಂದ ಸಾಕ್ಷಿ **2** ರವರಿಗೆ ಹೊಡೆದು ಹಲ್ಲೆ ಮಾಡಿ ಕತ್ತು ಹಿಸುಕಿರುತ್ತೀರಿ ಮತ್ತು ಸಾಕ್ಷಿ **1** ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ಕಾರಣದಿಂದ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತ **(**ಬಿಎನ್‌ಎಸ್**)-2023** ಕಲಂ **115(2)** ಸಹವಾಚಕ **3(5)** ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

**4.** ನಾಲ್ಕನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ **2** ರವರೊಂದಿಗೆ ಗಲಾಟೆ ತೆಗೆದು ಹಲ್ಲೆ ಮಾಡುತ್ತಿದ್ದಾಗ ಸಾಕ್ಷಿ **1** ಮತ್ತು **3** ರವರು ಸಾಕ್ಷಿ **2** ರವರನ್ನು ಬಿಡಿಸಿಕೊಳ್ಳಲು ಬಂದಾಗ ಆರೋಪಿಗಳಾದ ನೀವು ಸಾಕ್ಷಿ **3** ರವರನ್ನು ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತೀರಿ ಮತ್ತು ಕೆಳಕ್ಕೆ ಬೀಳಿಸಿ ತಲೆ ಕೂದಲನ್ನು ಹಿಡಿದು ಎಳೆದಾಡಿರುತ್ತೀರಿ, ನಂತರ ಅವರು ತೊಟ್ಟಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಸಾರ್ವಜನಿಕವಾಗಿ ಅವಮಾನ ಮಾಡಿರುತ್ತೀರಿ. ಈ ಕಾರಣದಿಂದ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತ **(**ಬಿ.ಎನ್.ಎಸ್**-2023)** ಕಲಂ **76** ಸಹವಾಚಕ **3(5)** ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

**5.** ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ **1** ರಿಂದ **3** ರವರೊಂದಿಗೆ ಜಗಳ ತೆಗೆದು ಸಾಕ್ಷಿ **1** ಮತ್ತು **2** ರವರಿಗೆ ಹಲ್ಲೆ ಮಾಡಿ ನಂತರ ಮೂರು ಜನರನ್ನು ಉದ್ದೇಶಿಸಿ ಬೈದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಈ ಕಾರಣದಿಂದ ಆರೋಪಿಗಳಾದ ನೀವು ಈ

ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್-2023) ಕಲಂ 351(2), 352 ಸಹವಾಚಕ 3(5) ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

ಆರೋಪಿಗಳಾದ ನೀವು ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಜ್ಯೋತ್ಸ್ನ ಡಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**
**(ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆ: 5076/2025**

ಪಿರ್ಯಾದುದಾರರು: ಕೆ ಆರ್ ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

- ವಿರುದ್ಧ -

1 ನೇ ಆರೋಪಿ: ಕುಮಾರ ಬಿ.ಡಿ.

**ದೋಷಾರೋಪಣೆಗೆ ಆರೋಪಿಯು ನೀಡಿದ ಉತ್ತರ**

1. ಕನ್ನಡ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆಯ ಅಂಶಗಳು ನಿಮಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

2. ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

ಈ ಪ್ರಕರಣದ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಪಡೆದುಕೊಳ್ಳಲಾಯಿತು.

(ಜ್ಯೋತ್ಸ್ನ ಡಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

ಆರೋಪಿಯ ಸಹಿ

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**
**(ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆ: 5076/2025**

ಪಿರ್ಯಾದುದಾರರು: ಕೆ ಆರ್ ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

- ವಿರುದ್ಧ -

2 ನೇ ಆರೋಪಿ: ಕೃಷ್ಣ ಬಿ.ಆರ್.

**ದೋಷಾರೋಪಣೆಗೆ ಆರೋಪಿಯು ನೀಡಿದ ಉತ್ತರ**

1. ಕನ್ನಡ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆಯ ಅಂಶಗಳು ನಿಮಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

2. ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

ಈ ಪ್ರಕರಣದ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಪಡೆದುಕೊಳ್ಳಲಾಯಿತು.

(ಜ್ಯೋತ್ಸ್ನಾ ಡಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

ಆರೋಪಿಯ ಸಹಿ